ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಕರಣದಲ್ಲಿ ದೂರು ಬರದಿದ್ದರೂ ಸಹ ಇದು ಸಾರ್ವಜನಿಕರ ದೃಷ್ಟಿಯನ್ನು ಸೆಳೆದ ಪ್ರಕರಣವಾದ್ದರಿಂದ, ಸುಮಿತ್ರಾದೇಸಾಯಿ ಇದ್ದಾಳೆಯೇ, ಇಲ್ಲವೇ ಅಥವಾ ಹೀನಾಗಿದ್ದಾಳೆ ಎಂಬುದನ್ನು ಪತ್ತೆ ಮಾಡುವುದು ಸರ್ಕಾರದ ಕರ್ತವ್ಯವೆಂದು ತಿಳಿದುಕೊಂಡು ಈ ಕಾರ್ಯ ಮಾಡುತ್ತಿದ್ದೇವೆ. ಇದಕ್ಕಾಗಿ ಹೆಚ್ಚು ಹಣ ಖರ್ಚಾದರೂ ಕೂಡ ಅದು ವ್ಯರ್ಥವಾದ ಖರ್ಚು ಎಂದು ನಾನು ಭಾವಿಸುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ: ಈಗ ತಾನೆ ಹೇಳಿದಿರಿ ಸರ್ಕಾರದ ಮೇಲೆ ಯಾವ ಅಪಾದನೆಯಿಲ್ಲ ಎಂದು, ಸುಮಿತ್ರಾದೇಸಾಯಿ ಬಗ್ಗೆ ರಾಜ್ಯ ಸಚಿವರಾದ ಶ್ರೀ ಕಿತ್ತೂರ್‌ರವರು ಯಾತಕ್ಕೆ ರಾಜೀನಾಮೆ ಕೊಡಬೇಕಾಗಿತ್ತು, ರಾಜೀನಾಮೆಯನ್ನು ಮುಖ್ಯಮಂತ್ರಿಗಳು ಯಾತಕ್ಕೆ ಒಪ್ಪಿಕೊಳ್ಳಬೇಕಾಗಿತ್ತು ?

ಶ್ರೀ ಎನ್. ಹುಚ್ಚಮಾಸ್ತಿಗೌಡ: —Caesars wife should be above suspician ಎಂದು ಹೇಳುವ ದೃಷ್ಟಿಯಿಂದ ರಾಜೀನಾಮೆ ಕೊಟ್ಟಿದ್ದಾರೆ, ಅದನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ :—ಮುಖ್ಯ ಮಂತ್ರಿಗಳು ಯಾವಾಗ ಹೇಳಿಕೆ ಕೊಡುತ್ತಾರೆ ? ಎರಡನೆಯದು 47 ಮಂದಿ ಅಧಿಕಾರಿಗಳು ಇದರಲ್ಲಿ ಪತ್ತೆ ಹಚ್ಚುವ ಕಾರ್ಯದಲ್ಲಿ ನಿರತರಾಗಿದ್ದಾರೆ, ಅವರು ರಾಜ್ಯ ಸರ್ಕಾರದ ಪೊಲೀಸ್ ಸಿಬ್ಬಂದಿಗೆ ಸಂಬಂಧಪಟ್ಟವರು ಎಂದು ಭಾವನೆ ಮಾಡಿದ್ದೇನೆ. ಕೇಂದ್ರ ಸರ್ಕಾರದ ತನಿಖಾ ಮಂಡಳಿ—ಸಿ.ಬಿ.ಐ.ಗೆ ವಹಿಸಿದ ಮೇಲೆ, ಅದನ್ನು ಅವರಿಗೆ ಬಿಡುವುದಕ್ಕೆ ಯೋಚನೆ ಮಾಡುತ್ತೀರಾ ಅಥವಾ ನಮ್ಮ 47 ಜನ ಪೋಲೀಸರ ಬೆಂಬಲವನ್ನು ತೆಗೆದುಕೊಂಡು, ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಅಧ್ಯಕ್ಷರು.—ಅದಕ್ಕೆ ಉತ್ತರ ಕೊಟ್ಟಿದ್ದು ಆಯಿತು.

GREEN BELT ARROUND BANGALORE

22. Sri K. R. SRINIVASULU NAYUDU (Shanthinagar)—Will the Minister for Municipal Administration be pleased to state :—

(*a*) whether there is any proposal before Government to provide green belt around Bangalore;

(*b*) if so, whether it has been sanctioned ?

Sri B. BASAVALINGAPPA (Minister for Municipal Administration).—

(*a*) Yes

(*b*) Yes

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು :— ಸ್ವಾಮಿ ನನ್ನ ಎರಡು ಪ್ರಶ್ನೆಗಳಿಗೂ ''ಇದೆ ಹೌದು'' ಎಂದು ಉತ್ತರ ಹೇಳಿದ್ದೀರಿ. ನನ್ನ 10 ವರ್ಷಗಳ ಅನುಭವದಿಂದ ಹೇಳುತ್ತಿದ್ದೇನೆ, ಹಸಿರು ಪ್ರದೇಶ ಒದಗಿಸುವ ಸಲಹೆ ಏನು ಇದೆ, ಅದು ಏನು ಆಗಿದೆ ಎಂದರೆ ಇವತ್ತು ಗೋಡಾನ್ಸ್‌ಗಳಾಗಿವೆ. ಆದುದರಿಂದ ಇದರ ಬಗ್ಗೆ ಹೆಚ್ಚಿನ ಜವಾಬ್ದಾರಿ ವಹಿಸತಕ್ಕ ಸಂಘ ಸಂಸ್ಥೆ ಮತ್ತು ಇಲಾಖೆಗಳಲ್ಲಿರುವವರು ಅದರ ಬಗ್ಗೆ ಎಷ್ಟು ಎಸ್ಟೀಮೇಟ್ ಆಗಿದೆ, ಎಷ್ಟು ಖರ್ಚಾಗಿದೆ ಎಂಬುದರ ಬಗ್ಗೆ ವಿವರ ಹೇಳಬೇಕು ?

* ಶ್ರೀ ಬಿ. ಬಸವಲಿಂಗಪ್ಪ :— 22-5-1972 ನೇ ತಾರೀಖಿನಿಂದ ಈ ಗ್ರೀನ್ ಬೆಲ್ಟ್ ಏರಿಯಾಗೆ ಸ್ಯಾಂಕ್ಷನ್ ಆಗಿದೆ. ಅಲ್ಲಿಂದ ಇಲ್ಲಿಯವರೆಗೆ ಅಂದಾಜು ವಗೈರೆ ಕಾರ್ಯಕ್ರಮ ತೆಗೆದುಕೊಂಡು ಕೆಲಸ ಮಾಡುತ್ತಿದ್ದೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು :— ಖರ್ಚು ಎಷ್ಟು ಆಗಿದೆ ?

ಶ್ರೀ ಬಿ. ಬಸವಲಿಂಗಪ್ಪ ; ಖರ್ಚಿನ ವಿವರ ನನ್ನಲ್ಲಿ ಇಲ್ಲ.

ಶ್ರೀ ಕೆ. ಶ್ರೀರಾಮುಲು :—ಸ್ವಾಮಿ ಗ್ರೀನ್ ಬೆಲ್ಟ್ ಏರಿಯಾ ಬಗ್ಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ಡಿವಿಜನ್ ನಂಬರ್ 8, ಅಂದರೆ ತಾಪು ವಾಸ ಪ್ಯಾಡುವ ಕಡೆ, ಭಾಷ್ಯಂ ಪಾರ್ಕ್ ಇದೆ. ಪಾರ್ಕ್‌ನೊಳಗೆ ಮನೆ ಕಟ್ಟುತ್ತಿದ್ದಾರೆ ಇದರ ಉದ್ದೇಶ ಏನು ? ಗ್ರೀನ್ ಬೆಲ್ಟ್ ಏರಿಯಾ ಮಾಡುವುದಕ್ಕೆ ಲಕ್ಷಾಂತರ ರೂಪಾಯಿ ಮಾಡುವುದು ಮಾಡಿದ ನಂತರ ಅಲ್ಲಿ ಸೈಟ್ ಕೊಡುವುದು ಸರ್ಕಾರದ ನೀತಿಯೇ ?

ಶ್ರೀ ಬಿ. ಬಸವಲಿಂಗಪ್ಪ :— ಗ್ರೀನ್ ಬೆಲ್ಟ್ ಏರಿಯಾದಲ್ಲಿ ಯಾರಿಗೂ ಮನೆ ಕಟ್ಟಲಿಕ್ಕೆ ಕೊಡಬಾರದು ಎಂದು ಇದೆ. ಅಂಥ ವಿಷಯಗಳನ್ನು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶ್ಯಾಮಣ್ಣ :—ಸಿವಿಕ್ ಅಮಿನಿಟೀಸ್ ಒಳಗೆ ಬಿಟ್ಟಿರತಕ್ಕ ಓಪನ್ ಸ್ಪೇಷಸ್‌ನಲ್ಲಿ ಟ್ರಸ್ಟ್ ಬೋರ್ಡಿನವರು ಹಂಚುತ್ತಿದ್ದಾರೆ, ಅದನ್ನು ತಡೆ ಗಟ್ಟುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :—ಗ್ರೀನ್ ಬೆಲ್ಟ್ ಏರಿಯಾಗೋಸ್ಕರ ಆಲಾಟ್ ಮಾಡಿದ್ದನ್ನು ಹಂಚುತ್ತಿಲ್ಲ, ಅಂಥ ವಿಷಯಗಳು ತಮ್ಮ ಗಮನಕ್ಕೆ ಬಂದಿದ್ದರೆ ನನಗೆ ಬರೆಯಿರಿ.

ಶ್ರೀ ಎಂ. ಎಸ್. ಕೃಷ್ಣನ್ :— ಗ್ರೀನ್ ಬಿಲ್ಟ್ ಏರಿಯೂ ಬೆಂಗಳೂರು ನುತ್ತ ಮುತ್ತ ಎಷ್ಟು ದೂರದವರೆಗೆ ಇದೆ, ಎಷ್ಟು ದೂರದಲ್ಲಿ ಇರುತ್ತದೆ ಅದರ ವಿವರಣೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :—ಗ್ರೀನ್ ಬೆಲ್ಟ್ ಏರಿಯಾ ಎಂದರೆ ಮುನಿಸಿಪಲ್ ಏರಿಯೂ ಏನು ಇದೆ ಅದರ ನುತ್ತ ಮುತ್ತ ೫ ಮೈಲಿ ಪ್ರದೇಶ ಏನು ಇದೆ. ಅದು ಮತ್ತು ಆ ಏರಿಯಾದಿಂದ ಒಂದು ಫರ್ಲಾಂಗ್ ಆಗುತ್ತದೆ. ಅದು ಗ್ರೀನ್ ಬೆಲ್ಟ್ ಏರಿಯಾ ಆಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು :— ಸ್ವಾಮಿ ಬೆಂಗಳೂರು ಪಟ್ಟಣದಲ್ಲಿ ಗ್ರೀನ್‌ಬೆಲ್ಟ್‌ಗೆ ಉತ್ತೇಜನ ಕೊಡುವ ಉದ್ದೇಶದಿಂದ ಲೇಜಿಸ್‌ಲೇಷನ್ ತೆಗೆದುಕೊಂಡು ಬರುತ್ತಿರಾ ? ಕಾರ್ಪೊರೇಷನ್‌ನವರು ಟ್ರಸ್ಟ್ ಬೋರ್ಡಿನವರು ಸ್ಟೇಟ್ ಆಲಾಟ್ ಮಾಡುವ ಕಾಲದಲ್ಲಿ ಅವರೇ ಮರಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುವುದು ಅಥವಾ ಯಾರಾದರೂ ಪ್ರೈವೇಟ್ ಪಾರ್ಟಿಸ್‌ಗೆ ಮರ ಗಳನ್ನು ಹೆಚ್ಚಿನ ರೀತಿಯಲ್ಲಿ ಬೆಳೆಸುವುದಕ್ಕೆ ಉತ್ತೇಜನ ಕೊಡುವುದು, ಇದರ ಬಗ್ಗೆ ಒಂದು ಲೆಜಿಸ್‌ಲೇಷನ್ ತರುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ಮತ್ತು ಅದನ್ನು ಯಾವಾಗ ತರುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ :—ಲೆಜಿಸ್‌ಲೇಷನ್ ಅನಾವಶ್ಯಕ, ಪ್ಲಾನಿಂಗ್ ಅಥಾರಿಟಿ ಏನು ಇದೆ ಅವರೇ ಮಾಡುತ್ತಾರೆ, ಪ್ಲಾನಿಂಗ್ ಆಕ್ಟ್ ಕೂಡ ಇದೆ. ಅದರ ಪ್ರಕಾರ ಕೆಲಸ ನಾವು ತೆಗೆದುಕೊಳ್ಳುತ್ತೇವೆ. ಪ್ರತ್ಯೇಕವಾಗಿ ನಮಗೆ ಆಕ್ಟ್ ಬೇಕಾಗಿಲ್ಲ.

ALLOTMENT OF FERTILISERS TO BELLARY DISTRICT

172. SRI B. E. RAMAIAH (Siruguppa)—

Will the Minister for Agriculture and Forests be pleased to state :—